ಸುಮಾರು ಎರಡು ಮೂರು ವರ್ಷಗಳಿಂದ ಆಲೋಚನೆಯಲ್ಲಿದ್ದು ಈಗ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—600 ಎಕರೆ ನೀರಾವರಿಗೆ ಬರಬಹುದೆಂದು ಹೇಳಿರುವುದು ಯಾವ ಆಧಾರದ ಮೇಲೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಿಲಿಮಿನರಿ ಎಸ್ಟಿಮೇಟ್ ಆಗಿ ಅದರ ಪ್ರಕಾರ ಇಷ್ಟಾಗಬಹುದೆಂದು ಅಂದಾಜಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—600 ಎಕರೆ ಎಲ್ಲಾ ಹೊಸದೊ ಅಥವಾ ಹಳೆ ತರಿ ಜಮೀನಿಗೆ ನೀರು ಕೊಟ್ಟಿರುವುದೂ ಸೇರಿದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಳೇದು ಮತ್ತು ಹೊಸದು ಎರಡೂ ಸೇರಿದೆ. ಒಂದು ರಫ್ ಸ್ಕೀಂ ಒಡ್ಡು ಬೇರೆ ಇದೆ. ಅದರಿಂದ ಛಾನಲ್ ತೆಗೆದು ನೀರಾವರಿ ಮಾಡಿಕೊಂಡಿರುವುದೂ ಇದರಲ್ಲಿ ಸೇರಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈ ಪ್ರಾಜೆಕ್ಟಿನಿಂದ ಸಾವಿರಾರು ಕೆರೆಗಳಿಗೆ ನೀರು ಸರಬರಾಯಾಗಿ ಅದರಿಂದ ಬೇಕಾದಷ್ಟು ಬೆಳೆ ಯಾಗುತ್ತದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾವಿರಾರು ಎಂದು ಗೊತ್ತಿಲ್ಲ. ಕೆಲವು ಕೆರೆಗಳಿಗೆ ನೀರನ್ನು ಬಿಟ್ಟು ಉಪಯೋಗಿಸಬಹುದೆಂದು ಪ್ರವೀಣರು ಹೇಳಿದ್ದಾರೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಇದನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಜಾಗ್ರತೆ ಮಾಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜಾಗ್ರತೆ ಮಾಡುವುದಕ್ಕೆ ಇನ್‌ಸ್ಟ್ರಕ್ಷನ್ ಕೊಟ್ಟಿದೆ. ಆದಷ್ಟು ಬೇಗ ಇನ್‌ವೆಸ್ಟಿಗೇಷನ್ ಮಾಡಿ ಅಭಿಪ್ರಾಯ ವರದಿ ಕಳುಹಿಸಬೇಕೆಂದು ತಿಳಿಸಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಚನ್ನರಾಯಪಟ್ಟಣದಲ್ಲಿ 10-12 ವರ್ಷಗಳಿಂದ ತುಂಬದಿರುವ ಕೆರೆಗೆ ನೀರನ್ನು ಕೊಡಲು ಸಾಧ್ಯವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಬೇಗೂರಿಗೆ ಸಂಬಂಧಪಟ್ಟದೆಯೆಂದು ಕಂಡುಬರುತ್ತದೆ. ಆದ್ದರಿಂದ ಆ ಪ್ರಶ್ನೆಗೆ ಅವಕಾಶವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇನ್ಯಾವುದಾದರೂ ಅಣೆಕಟ್ಟನ್ನು ಅಲ್ಲಿ ಕಟ್ಟುವುದಕ್ಕೆ ಸಾಧ್ಯವಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಏಳುವುದಿಲ್ಲ. ಕೆರೆ ಪ್ರಾಜೆಕ್ಟು ಅವರು ಕೇಳಿರುವುದು.

Road connecting old Mysore-Bangalore Road at Boodiguppe and Kankanhalli-Kodihalli Road at Srinivasanahalli.

Q.—54. Sri S. KARIAPPA (Bangalore District—General).—

Will the Government be pleased to state :—

(*a*) whether there is a proposal to construct a road connecting old Mysore-Bangalore Road at Boodiguppe and Kankanhalli-Kodihalli Road at Srinivasanahalli in order to avoid the river Arkavathi ;

(*b*) the stage at which it stands at present ?

A.—The Hon'ble Sri T. MARIAPPA (Home Minister).—

(*a*) No such proposal in Public Works Department.

(*b*) Does not arise.

ಶ್ರೀ ಎಸ್. ಕರಿಯಪ್ಪನವರು.—ಪಬ್ಲಿಕ್ ವರ್ಕ್ಸ್ ಇಲಾಖೆಯವರು ಈ ವಿಚಾರದಲ್ಲಿ ಯಾವ ಅಂದಾಜೂ ಮಾಡಿಲ್ಲವೆಂದು ಉತ್ತರ ಕೊಟ್ಟಿದೆ. ಹಾಗಾದರೆ ಡೆವಲಪ್‌ಮೆಂಟ್ ಇಲಾಖೆಗೆ ಇದು ಸಂಬಂಧಪಟ್ಟದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಆ ವಿಚಾರದಲ್ಲಿ ಸಮಾಚಾರ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಇದನ್ನು ಡೆವಲಪ್‌ಮೆಂಟ್ ಇಲಾಖೆಯಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೆ ವರ್ಗಾಯಿಸುವುದಕ್ಕೆ ಸಾಧ್ಯವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಡೆವಲಪ್‌ಮೆಂಟ್ ಫಂಡಿಲ್ಲದಿದ್ದು ಪಬ್ಲಿಕ್ ವರ್ಕ್ಸ್ ಇಲಾಖೆ ಫಂಡು ಕೊಟ್ಟರೆ ತೆಗೆದು ಕೊಳ್ಳಬಹುದು; ಅದು ಪರ್ಯಾಲೋಚನೆಯಲ್ಲಿದೆ. ಈಗ ರೆವೆನ್ಯೂ ಸೆಕ್ರೆಟರಿಯವರ ಬಳಿ ಫೈಲು ಬಂದಿದೆಯೆಂದು ವರ್ತಮಾನ ಬಂದಿದೆ; ತರಿಸಿ ನೋಡಬೇಕು.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ನಾವು ಕೇಳಿರುವ ಡೀವಿಯೇಷ್ನ ರಸ್ತೆ ಸುಮಾರು 5 ಮೈಲಿ ಆಗಬಹುದಲ್ಲವೆ?

ಮಾನ್ಯ ಶ್ರೀ ಟಿ ಮರಿಯಪ್ಪನವರು.— ಸುಮಾರು ಅಷ್ಟಾಗಬಹುದು.

ಶ್ರೀ ಟಿ. ಮಾದಯ್ಯಗೌಡರು.—ಈ ರಸ್ತೆ ಮಾಡುವುದರಿಂದ ಕಾನಕಾನಹಳ್ಳಿ ತಾಲ್ಲೂಕಿನ ಸುಮಾರು 75 ಗ್ರಾಮಗಳ 55 ಸಾವಿರ ಪ್ರಜೆಗಳಿಗೆ ಅನುಕೂಲವಾಗುತ್ತದೆ, ಈ ರಸ್ತೆಯಿಲ್ಲದಿದ್ದರೆ ಅವರಿಗೆ ಪೂರ್ತಿ ಮಳೆಗಾಲದಲ್ಲಿ ಬೇರೆ ಕಡೆ ಹೋಗುವುದಕ್ಕೆ ಬರುವುದಕ್ಕೆ ಅವಕಾಶವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅದು ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲವಾಗಿದೆಯಂದು ಹೇಳುವುದಕ್ಕೆ ಯಾವ ಅಭ್ಯಂತರವೂ ಇಲ್ಲ.

ಶ್ರೀ ಟಿ. ಮಾದಯ್ಯಗೌಡರು.— ಇದು ಯಾವ ಪ್ರಾಂತಕ್ಕೆ ಸೇರುತ್ತದೆಯೋ ಆ ಪ್ರಾಂತದಿಂದ ಮೈಸೂರು ಸರ್ಕಾರಕ್ಕೆ ಸುಮಾರು ಹತ್ತು ಸಾವಿರ ಪಲ್ಲರಾಗಿ ಬರುತ್ತದೆಯೆಂಬುದು ಸರ್ಕಾರದ ಗಮನದಲ್ಲಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಕಾನಕಾನಹಳ್ಳಿಯು ರಾಗಿಗೆ ಸರ್ಪ್ಲಸ್ ಏರಿಯ. This particular area is cut off and it requires intervillage communications ಎಂಬುದು ಸರ್ಕಾರಕ್ಕೆ ಗೊತ್ತಾಗಿದೆ. ಈ ವಿಷಯದಲ್ಲಿ ಕಾರ್ಯಕ್ರಮವಿದೆ.

ಶ್ರೀ ಟಿ. ಮಾದಯ್ಯಗೌಡರು.—ಮೇಕೆದಾಟು ಪ್ರಾಜೆಕ್ಟಿಗೆ ಕಾನಕಾನಹಳ್ಳಿಯಿಂದ ಈ ಡೀವಿಯೇಷ್ನ ರಸ್ತೆಯಲ್ಲಿ ಹೋದರೆ 19 ಮೈಲಿ, ಬೇರೆ ಕಡೆಯಿಂದ 26 ಮೈಲಿ ಆಗುತ್ತದೆ ಎಂಬುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಬಂದಿದೆ. ಆದರೆ ಅಲ್ಲಿ ತರಿ ಜಮೀನನ್ನು ಆಕ್ವೈರ್ ಮಾಡಿಕೊಳ್ಳಬೇಕಾಗಿ ಬರುವುದರಿಂದ ಬಹಳ ಬೆಲೆ ಕೊಡಬೇಕಾಗುತ್ತದೆ. ಆದ್ದರಿಂದ ಪರ್ಯಾಲೋಚನೆ ಮಾಡಿ ನೋಡಬೇಕು.

ಶ್ರೀ ಟಿ. ಮಾದಯ್ಯಗೌಡರು.—ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಯು 87 ಸಾವಿರ ರೂಪಾಯಿಗಳ ಅಂದಾಜು ಮಾಡಿ ಈ ರಸ್ತೆಗೆ ಸ್ಪೆಷಲ್ ಗ್ರಾಂಟು ಪಡೆಯಲು ಮೇಲಕ್ಕೆ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅವರು ತಮ್ಮ ಭಾಗದ ಹಣ ಕೊಟ್ಟಿದ್ದರೂ ಈಗ ಅದು ಸಾಲದೆಂದೂ, ಬೇರೆ ಹಣ ಸರ್ಕಾರದವರು ಕೊಡಬೇಕೆಂದೂ ಕೇಳಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಡಿಸ್ಟ್ರಿಕ್ಟಿಗೆಲ್ಲಾ ಅನುಕೂಲವಾಗುವಾಗ 87 ಸಾವಿರ ರೂಪಾಯಿ ಖರ್ಚು ಮಾಡಲು ಹಿಂಜರಿಯುವುದಿಲ್ಲವೆಂದು ಅವರು ಕಳುಹಿಸಿದ್ದಾರಲ್ಲವೆ?

The Hon'ble Sri T. MARIAPPA.— Well Sir, that would be considered.

ಶ್ರೀ ಟಿ. ಮಾದಯ್ಯಗೌಡರು.—ಆದಷ್ಟು ಜಾಗ್ರತೆ ಈ ರಸ್ತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಮಾಡುತ್ತೇವೆ.

Accidents in Tunga Tunnel Works in Shimoga.

Q.—145. Sri L. SIDDAPPA (Shimoga District—General).—

Will the Government be pleased to state :—

(*a*) the number of fatal accidents that have taken place in the Tunga Tunnel Works in Shimoga with the dates on which the said accidents took place, the number and names of persons died and the number and names of persons injured with the nature of injuries in each case;